## ಹೆಚ್ಚುವರಿ ಸಿವಿಲ್ ನ್ಯಾಯಾದೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾಳಿ

**ಸಿಸಿ ನಂ.926/2018**

ಸರ್ಕಾರ ಃ ನ್ಯಾಮತಿ ವಿರುದ್ಧ ಚೌಡಪ್ಪ ಮತ್ತು ಇತರರು

**ದೋಷಾರೋಪಣೆ**

ನಾನು ಶ್ರೀಮತಿ ಅರ್ಚನ ಕೆ ಉಣ್ಣಿತ್ತಾನ್ , ಬಿ.ಇ, ಎಲ್.ಎಲ್. ಬಿ, ಹೆ. ಪ್ರ. ದ. ನ್ಯಾ ದಂ., ಹೊನ್ನಾಳಿ ಆರೋಪಿತರಾದ ನೀವು

1. ಚೌಡಪ್ಪ ಬಿನ್ ಚೆನಕಪ್ಪ
   ವಯಸ್ಸು 32 ವರ್ಷ,
2. ಶ್ರೀಮತಿ ದೀಪಾ ಕೋಂ ಚೌಡಪ್ಪ
   ವಯಸ್ಸು 28 ವರ್ಷ,
3. ಶ್ರೀಮತಿ ರೇಣುಕಮ್ಮ ಕೋಂ ಮಾಲತೇಶ
   ವಯಸ್ಸು 35 ವರ್ಷ,
4. ಶ್ರೀಮತಿ ಸುಮಿತ್ರ ಕೋಂ ಮಂಜಪ್ಪ
   ವಯಸ್ಸು 35 ವರ್ಷ,
5. ಶ್ರೀಮತಿ ಜಾನಕಮ್ಮ ಕೋಂ ಮಂಜಪ್ಪ
   ವಯಸ್ಸು 38 ವರ್ಷ,
6. ಶ್ರೀಮತಿ ರೂಪಾ ಕೋಂ ಸುರೇಶ
   ವಯಸ್ಸು 26 ವರ್ಷ,
7. ಗಿರಿಯಪ್ಪ ಬಿನ್ ಸಣ್ಣರಾಮಪ್ಪ
   ವಯಸ್ಸು 65 ವರ್ಷ,
8. ಸುರೇಶ ಬಿನ್ ಗಿರಿಯಪ್ಪ
   ವಯಸ್ಸು 35 ವರ್ಷ,

ಇವರೆಲ್ಲರ ವಾಸಃ ಕೊರಚರಹಟ್ಟಿ ಗ್ರಾಮ,
ನ್ಯಾಮತಿ ತಾಲ್ಲೂಕು

ಎಂಬುವವರ ಮೇಲೆ ಆಪಾದನೆ ಹೊರಿಸುವುದೇನೆಂದರೆ,

ದಿಃ 27-06-2018 ರಂದು ಸಂಜೆ 6 ಗಂಟೆ ಸಮಯದಲ್ಲಿ ಸಾಕ್ಷಿ 1 ರವರು ಆರೋಪಿತರ ಪತ್ತೆ ಬಗ್ಗೆ ಸಾಕ್ಷಿ 4 ರಿಂದ 8 ರವರನ್ನು ನೇಮಕ ಮಾಡಿ ಕಳುಹಿಸಿದ್ದು , ಸದರಿ ಸಾಕ್ಷಿದಾರರು ಅದೇ ದಿನ ಬಾತ್ಮೀದಾರರಿಂದ ಮಾಹಿತಿ ಸಂಗ್ರಹಿಸಿ ನ್ಯಾಮತಿ ತಾಲ್ಲೂಕು ಕೋರಚರ ಹಟ್ಟಿಗೆ ಹೋಗಿ 7 ನೇ ಆರೋಪಿ ಮನೆಯಲ್ಲಿದ್ದ ಸದರಿ ಕೇಸಿನ ಆರೋಪಿತರಾದ ಸತೀಶ ಮತ್ತು ಸುರೇತ್ ರವರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಹೋದಾಗ

ಅವರನ್ನು ವಶಕ್ಕೆ ತೆಗೆದುಕೊಳ್ಳದಂತೆ ಅಡ್ಡಿಪಡಿಸಿರುತ್ತೀರಿ . ಅಂತಾ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 353 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಂದು ಅರೋಪಿಯಾದ ನೀವುಗಳು ಸಾಕ್ಷಿ 4 ರವರು ಸಾಕ್ಷಿ 1 ರವರಿಗೆ ಫೋನ್ ಮಾಡಿ ಸದರಿ ವಿಚಾರ ತಿಳಿಸಿದ್ದು, ಆಗ ಸಾಕ್ಷಿ 1 ರವರು ಸಾಕ್ಷಿ 9 ರಿಂದ 14 ರವರೊಂದಿಗೆ ಕೊರಚರ ಹಟ್ಟಿಗೆ ಹೋಗಿ ರಾತ್ರಿ 10 ಗಂಟೆ ಸಮಯದಲ್ಲಿ 7 ನೇ ಆರೊಪಿತರ ಮನೆಗಳಿಗೆ ಹೋಗಿ ಠಾಣಾ ಗುನ್ನೆ ನಂ 430/17 ರ ಪ್ರಕರಣದ ಆರೋಪಿತರನ್ನು ಮನೆಯಿಂದ ಹೊರಗೆ ಕರೆಯಿಸಿ ವಿಚಾರಣೆಗೆ ಕರೆದುಕೊಂಡು ಬರುವಾಗ 7 ನೇ ಆರೋಪಿ ನೀವು ಅಲ್ಲ ಸೇರಿದ್ದ ಹೆಣ್ಣು ಮಕ್ಕಳೆಲ್ಲಾ ಮುಂದೆ ಬನ್ನಿ ಈ ಸೂಳೇಮಕ್ಕಳು ಸತೀಶ ಮತ್ತು ಸುರೇಶರವರನ್ನು ಕರೆದುಕೊಂಡು ಹೋಗುತ್ತಾರೆಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಅಂತಾ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಂದು ಅರೋಪಿಯಾದ ನೀವುಗಳು ಸತೀಶ ಮತ್ತು ಸುರೇಶ ರವನ್ನು ಕರೆದುಕೊಂಡು ಹೋಗುವಾಗ ಅಕ್ರಮ ಗುಂಪು ಕಟ್ಟಿಕೊಂಡು ದೊಂಬಿಮಾಡಿರುತ್ತೀರಿ ಎಂದು ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 143 ಮತ್ತು 147 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಂದು ಅರೋಪಿಯಾದ ನೀವುಗಳು ಕೈಯಲ್ಲಿ ಅಪಾಯಕಾರಿ ಆಯುಧವಾದ ಕಲ್ಲನ್ನು ಕೈಯಲ್ಲಿ ಹಿಡಿದುಕೊಂಡಿರುತ್ತೀರಿ ಅಂತಾ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 148 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಂದು ಆರೋಪಿತರಾದ ನೀವುಗಳು ಸೇರಿಕೊಂಡು ಸಾಕ್ಷಿ 1 , 4 ರಿಂದ 14 ರವರಿಗೆ ದೂಡಾಡಿ, ಸಾಕ್ಷಿ 1 ರವರು ಉಟ್ಟಿದ್ದ ಸಮವಸ್ತ್ರದ ಕೊರಳು ಪಟ್ಟಿ ಹಿಡಿದುಕೊಂಡು ಶರ್ಟ್ ಹರಿದು ಎಳೆದಾಡಿರುತ್ತೀರಿ. ಅಂತಾ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 332 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಆರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಂದು ಆರೋಪಿತರಾದ ನೀವುಗಳು ನಿಮ್ಮಗಳ ಪೈಕಿ 7 ನೇ ಆರೋಪಿ ಕೈಮುಷ್ಠಿ ಮಾಡಿಕೊಂಡು ಸಾಕ್ಷಿ 1 ರವರ ಎದೆಗೆ ಗುದ್ದಿ ಸಾಕ್ಷಿ 1 ರವರ ಮೈಕೈಗೆ ಗುದ್ದಿ ನೋವುಂಟು ಪಡಿಸಿರುತ್ತೀರಿ ಅಂತಾ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಏಳನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಂದು ಆರೋಪಿತರಾದ ನೀವುಗಳು ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಸಾಕ್ಷಿ 1 ರವರ ಬಲಗಾಲಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ ಅಂತಾ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 324 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎಂಟನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಂದು ಆರೋಪಿತರಾದ ನೀವುಗಳುಸಾಕ್ಷಿ .1 , 9 ರಿಂದ 14 ರವರಿಗೆ ಒಂದು ಗತಿ ಕಾಣಿಸೋಣ ಎಂದು ಕೂಗಾಡುತ್ತಾ ಪ್ರಾಣ ಬೆದರಿಕೆ ಹಾಕಿರುತ್ತೀರಿ ಅಂತಾ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಈ ಮೇಲೆ ತಿಳಿಸಿದ ಆರೋಪಗಳ ವಿಚಾರಣೆಯು ಇದೇ ಕೋರ್ಟಿನ ಅಧಿಕಾರ ವ್ಯಾಪ್ತಿಯಲ್ಲಿರುವುದರಿಂದ ವಿಚಾರಣೆಗಾಗಿ ಆದೇಶಿಸಿದ್ದೇನೆ.

ತಾ: 12-04-2019

ಹೆ. ಪ್ರ.ದ. ನ್ಯಾ ದಂ., ಹೊನ್ನಾಳಿ

ಪ್ರಶ್ನೆ 1. ಮೇಲೆ ಓದಿ ಹೇಳಿದ ನಿಮ್ಮಗಳ ಮೇಲೆ ಮಾಡಿರುವ ಆರೋಪಗಳು ತಿಳಿಯಿತೇ?

ಉತ್ತರ: ಗೊತ್ತು

ಪ್ರಶ್ನೆ 2. ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ: ವಿಚಾರಣೆಯಾಗಬೇಕು

( ಈ ಮೇಲಿನ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆತನಿಗೆ ಓದಿ ಹೇಳಿ ಆತನ ಹೇಳಿಕೆ ಪಡೆದುಕೊಳ್ಳಲಾಯಿತು.)

ಆರೋಪಿ ನಂ. 1.

ಆರೋಪಿ ನಂ. 2.

ಆರೋಪಿ ನಂ. 3.

ಆರೋಪಿ ನಂ. 4.

ಆರೋಪಿ ನಂ. 5.

ಆರೋಪಿ ನಂ. 6.

ಆರೋಪಿ ನಂ. 7.

ಆರೋಪಿ ನಂ. 8.

ತಾಃ 12-04-2019

ಹೆ. ಪ್ರ.ದ. ನ್ಯಾ ದಂ., ಹೊನ್ನಾಳಿ